ಕರ್ನಾಟಕ ಸರಕಾರ

ಸಂಖ್ಯೆ:ಆರ್ ಡಿ 230 ಎಕ್ಯೂಬಿ 2024

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 13.12.2024

**ಅನಧಿಕೃತ ಟಿಪ್ಪಣಿ**

**ವಿಷಯ:** ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಶರವಣ ಟಿ.ಎ (ವಿಧಾನ ಸಭೆಯಿಂದ ಚುನಾಯಿತರಾದವರು) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:505 ಕ್ಕೆ ಭಾಗ ಉತ್ತರ ಸಲ್ಲಿಸುತ್ತಿರುವ ಬಗ್ಗೆ.

**ಉಲ್ಲೇಖ:** ತಮ್ಮ ಅ.ಸ.ಪತ್ರ ಸಂಖ್ಯೆ : ಲಾ 46 ಇತರೆ.ಅಂರಾಜವಿ/2024, ದಿನಾಂಕ: 06.12.2024.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಅ.ಸ ಪತ್ರದಲ್ಲಿ ಕೋರಿರುವಂತೆ ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಶರವಣ ಟಿ.ಎ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:505 ಕ್ಕೆ ಭಾಗ ಉತ್ತರವನ್ನು ಈ ಕೆಳಕಂಡಂತೆ ಸಲ್ಲಿಸಿದೆ.

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| 1 | ಸರ್ಕಾರದ ವಿವಿಧ ಇಲಾಖೆಗಳು ಭೂ ಸ್ವಾಧೀನ ಪ್ರಕರಣಗಳಲ್ಲಿ ಸಂತ್ರಸ್ತರಿಗೆ ಪರಿಹಾರ ನೀಡುವ ಸಂಬಂಧ ಒಟ್ಟು ಎಷ್ಟು ದಾವೆಗಳು ವಿವಿಧ ನ್ಯಾಯಾಲಯಗಳಲ್ಲಿ ನಡೆಯುತ್ತಿವೆ: (ಇಲಾಖಾವಾರು & ನ್ಯಾಯಾಲಯವಾರು ಮಾಹಿತಿ ನೀಡುವುದು) | ಮಾನ್ಯ ಸರ್ವೋಚ್ಚ ನ್ಯಾಯಾಲಯದ ಎಸ್.ಎಲ್.ಪಿ ಸಂಖ್ಯೆ:215-216/2023 ರ ಪ್ರಕರಣದಲ್ಲಿ ಬೆಂಗಳೂರು ಉತ್ತರ ತಾಲ್ಲೂಕು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ.29 ರಲ್ಲಿ ಓಕಳಿಪುರಂ ಜಂಕ್ಷನ್ ಅಗಲೀಕರಣಕ್ಕಾಗಿ ನೀಡಿದ ರೈಲ್ವೆ ಜಮೀನಿನ ಬದಲಿಗೆ ಬಿನ್ನಿಮಿಲ್ ಪ್ರದೇಶದಲ್ಲಿನ ಸ್ವತ್ತಿನ ಸಂಖ್ಯೆ: 59/1 ಸಿ.ಟಿ.ಎಸ್ ನಂ.3542 ರ ಪೈಕಿ 3-16 ಎ/ಗುಂ ಜಮೀನನ್ನು ಭೂಸ್ವಾಧೀನಪಡಿಸಿ ಕೊಂಡಿರುವ ಸಂಬಂಧ ಹೆಚ್ಚಿನ ಪರಿಹಾರಕ್ಕಾಗಿ ಪ್ರಕರಣ ದಾಖಲಿಸಿದ್ದು, ಬಾಕಿ ಇರುತ್ತದೆ. |
| 2 | ಇಲ್ಲಿಯವರೆಗೆ ವಿವಿಧ ನ್ಯಾಯಾಲಯಗಳು ಎಷ್ಟು ಅರ್ಜಿಗಳನ್ನು ವಜಾ ಮಾಡಿವೆ: (ಪ್ರಕರಣವಾರು ಮಾಹಿತಿ ನೀಡುವುದು) | ಯಾವುದು ಪ್ರಕರಣ ಇರುವುದಿಲ್ಲ |
| 3 | ಈ ವಜಾಗೊಂಡ ಅರ್ಜಿಗಳನ್ನು ಪ್ರಶ್ನಿಸಿ 120 ದಿನಗಳ ನಂತರ ಮೇಲ್ಮನವಿ ಸಲ್ಲಿಸಿದ ಪ್ರಕರಣಗಳ ಸಂಖ್ಯೆ ಎಷ್ಟು (ಇಲಾಖಾವಾರು ಮತ್ತು ಪ್ರಕರಣವಾರು ಮಾಹಿತಿ ನೀಡುವುದು) | ಯಾವುದು ಪ್ರಕರಣ ಇರುವುದಿಲ್ಲ |

| | | |
|---|---|---|
| 4 | ಮೇಲ್ಮನವಿ ಸಲ್ಲಿಸಲು ವಿಳಂಭಕ್ಕೆ ಕಾರಣಗಳೇನು ವಿಳಂಬ ನೀತಿಯಿಂದ ಸರ್ಕಾರದ ಬೊಕ್ಕಸಕ್ಕೆ ಉಂಟಾದ ಆರ್ಥಿಕ ಹೊರೆ ಎಷ್ಟು: ಹಾಗೂ ವಿಳಂಬಕ್ಕೆ ಕಾರಣರಾದವರ ಮೇಲೆ ಸರ್ಕಾರ ಏನು ಕ್ರಮ ಕೈಗೊಂಡಿದೆ? | ಸರ್ಕಾರಕ್ಕೆ ಅಧಿಕ ನಷ್ಟ ಉಂಟು ಮಾಡಲು ಯತ್ನಿಸಿದ ವಿಶೇಷ ಭೂಸ್ವಾಧೀನಾಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡುವ ಬಗ್ಗೆ ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಪ್ರಕರಣದಲ್ಲಿ ವಿಳಂಬ ನೀತಿ ಅನುಸರಿಸಿದ ವಿಶೇಷ ಭೂಸ್ವಾಧೀನಾಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಜರುಗಿಸಲು ವಿವರವಾದ ವರದಿ ಸಲ್ಲಿಸಲು ಜಿಲ್ಲಾಧಿಕಾರಿಗಳಿಗೆ ದಿನಾಂಕ: 26.07.2024 ರಂದು ನಿರ್ದೇಶನ ನೀಡಲಾಗಿರುತ್ತದೆ. ವರದಿ ಸ್ವೀಕೃತಿಯಾದ ನಂತರ ನಿಯಮಾನುಸಾರ ಕ್ರಮವಹಿಸಲಾಗುವುದು. |

HEMALATHA M Digitally signed by HEMALATHA M
Date: 2024.12.13 13:14:55 +05'30'

**(ಹೇಮಲತ.ಎಂ)**
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂಸ್ವಾಧೀನ-2).

**ಇವರಿಗೆ,**
ಸರ್ಕಾರದ ಆಧೀನ ಕಾರ್ಯದರ್ಶಿ,
ಕಾನೂನು ಇಲಾಖೆ, ವಿಧಾನ ಸೌಧ.